ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಸಭಾತ್ಯಾಗ ಮಾಡಿದರೂ ಧರಣಿಕ್ಕಿಂತ ಹೆಚ್ಚು ಗಂಭೀರ ವಿಷಯ ಇದು ಮನಗಂಡಿದ್ದೇವೆ. ಸರ್ಕಾರದ ಮನವೊಲಿಸುವಂತಹ ಪ್ರಯತ್ನ ಮಾಡಿದೆವು. ಅವರು ಏನು ಮಾಡಿದ್ದರು ಅದೇ ನಾವೂ ಮಾಡುವುದು ಎನ್ನುವ ತೀರ್ಮಾನಕ್ಕೆ ಈ ಸರ್ಕಾರವು ಬಂದಿದೆ. ಬಹುಶಃ ಜನ ಇದನ್ನು ಮೆಚ್ಚುವುದಿಲ್ಲ. ಹಗುರವಾಗಿ ಸರ್ಕಾರ ತೆಗೆದುಕೊಳ್ಳಬಹುದು. ಹಿಂದೆ ಮಾಡಿದಂತೆ ಈಗ ನಾವು ಮಾಡುವುದಕ್ಕೆ ಬಂದಿಲ್ಲ, ಹೊಸ ಪರಂಪರೆಹಾಕುತ್ತೇವೆ ಬದಲಾವಣೆ ತರುತ್ತೇವೆ ಎಂದು ಜನರಿಗೆ ಭರವಸೆ ಕೊಟ್ಟು ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಡದೇನೇ ಅವರಿಗೆ ಬೇಕಾದ ಅಧ್ಯಕ್ಷ ಉಪಾಧ್ಯಕ್ಷರಿಗೆ ಆಯ್ಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡದೇನೇ ಹಿಂಬಾಗಿಲಿನಿಂದ ತಮ್ಮವರನ್ನು ಯಾರನ್ನೋ ತಂದು ತಾವು ಅಧಿಕಾರದಲ್ಲಿ ಮುಂದುವರೆಯಬೇಕೆಂಮ ನಿಮ್ಮ ಪ್ರಯತ್ನ ಏನಿದೆ, ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ. ಏಕೆಂದರೆ ಈ ಅಧಿವೇಶನದಲ್ಲಿ ವೆಲ್‌ಗೆ ಬರಬಾರದು ಎಂದು ನಾವು ತೀರ್ಮಾನ ಮಾಡಿರುವುದರಿಂದ, ನೀವು ಮತ್ತೆ ವೆಲ್‌ನಲ್ಲಿ ಅವರು ಅಲ್ಲಿ ಇಬ್ಬರೂ ಸೇರಿ ಏನು ಮಾಡುತ್ತೀರೊ ಮಾಡಿ ನಾವು ಹೊರಗಡೆ ಕೂತು ನೋಡುತ್ತೇವೆ.

(ಬಿಜೆಪಿ ಸದಸ್ಯರಿಂದ ಸಭಾತ್ಯಾಗ)

ಶ್ರೀ ಎಂ.ಸಿ.ನಾಣಯ್ಯ: ಸ್ವಾಮಿ, ನಾವು ಹಿಂದಕ್ಕೆ ತೆಗೆದುಕೊಳ್ಳುವುದೂ ಇಲ್ಲ ಮತ್ತೆ ಅದಕ್ಕೆ ಅವರು ಹೇಳಿರುವ ತಿದ್ದುಪಡಿಯನ್ನು ನಾವು ತರುವುದೂ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವಾಗಲೂ ಅವರದು ಮೊಂಡುವಾದ ನಾವು ಕನ್‌ಸಿಡರ್ ಮಾಡುವುದಿಲ್ಲ, ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಅವರೇ ಹೇಳಿದ ತತ್ವದ ಪ್ರಕಾರ ಅವರು ನಡೆದುಕೊಳ್ಳುವುದಿಲ್ಲ. ಎರಡನೆಯದೇನೆಂದರೆ ಯಾವುದೋ ಪ್ರಸಂಗಗಳನ್ನು ಯಾವುದಕ್ಕೋ ಜೋಡಿಸುವುದು. ಎಪಿಎಂಸಿ ಪ್ರಸಂಗ ಬಂದರೆ ಸೊಸೈಟೀದು ನಾಮಿನೇಷನ್ ತರುವುದು. ಸ್ವಲ್ಪವಾದರೂ ನಾವು ಯಾವ ಆಕ್ಟಿನ ಬಗ್ಗೆ ಮಾತನಾಡುತ್ತಿದ್ದೇವೆ ಎಂಬ ಸೀರಿಯೆಸ್‌ನೆಸ್ ಇಲ್ಲ ನಾವು ಹೀಗೆ ಮಾಡುವುದು ನೀವು ಏನು ಬೇಕಾದರೂ ಮಾಡಿ ಅಂದರೆ ಇವರಿಗೆ ಕತ್ತಿನಪಟ್ಟಿ ಹಿಡಿಯಲು ಆಗುತ್ತದೆಯೇ? ಪ್ರಜಾಪ್ರಭುತ್ವದಲ್ಲಿ ರೆಪ್ರೆಸೆಂಟ್ ಮಾಡಬಹುದು. ಆರ್ಗ್ಯುಮೆಂಟ್ ಮಾಡಬಹುದು, ಧರಣಿ ಮಾಡಬಹುದು-ಇಂತಹ ಮೊಂಡು ವರ್ತನೆ ಇದ್ದರೆ, naturally this is the only way ಇದು ಬಿಟ್ಟ ಬೇರೆ ಹಾದಿ ಏನು ಇದೆ?

ಶ್ರೀ ಎಂ.ಸಿ.ನಾಣಯ್ಯ: ಇವತ್ತು ಇವರು ನಾಮಕರಣ ಮಾಡಿದ ಪದ್ಧತಿ ಪ್ರತಿಭಟಿಸಿ ಧರಣಿ ಮಾಡುತ್ತಿದ್ದಾರೆ ಆದರೆ ಪ್ರಜಾಪ್ರಭುತ್ವ ಮೌಲ್ಯಗಳ ಬಗ್ಗೆ ಮಾನ್ಯ ಖರ್ಗೆಯವರು ಒಂದನ್ನು ತಿಳಿದುಕೊಳ್ಳಬೇಕಾಗುತ್ತದೆ: ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ತಾವೇನು ಮಾಡಿದಿರಿ? ಖರ್ಗೆಯಾಗಿ ಅಲ್ಲ ತಾವೇ ಸಹಕಾರ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ